(A)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1)ಪಿಆರ್/394/2011-12

ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 02/09/14

ತಿದ್ದುಪಡಿ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳು

ವಿಷಯ: ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರು, ಮುಖ್ಯ ಅಭಿಯಂತರರು ಹಾಗೂ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ.

ಉಲ್ಲೇಖ: 1. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ (ವಿಷಯ ಸಂಖ್ಯೆ: ವಾಕಾಸ್ಥಾಸ/85/14-15) ದಿನಾಂಕ: 09/07/2014ರ ನಡವಳಿಗಳು.
2. ಈ ಕಛೇರಿ ಸಮಸಂಖ್ಯೆಯ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳು ದಿ:29/08/2007
3. ಈ ಕಛೇರಿ ಸಮಸಂಖ್ಯೆಯ ತಿದ್ದುಪಡಿ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳು ದಿನಾಂಕ: 28/09/2013

* * * * *

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಉಲ್ಲೇಖ-(1)ರ ನಡವಳಿಯ ತೀರ್ಮಾನದನ್ವಯ ಕೆ.ಎಂ.ಸಿ.ಕಾಯ್ದೆ 76ರ ನಿಯಮ 66, 67, 69ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಎಂ.ಲಕ್ಷ್ಮೀನಾರಾಯಣ, ಭಾ.ಆ.ಸೇ., ಅವರು ನಾನು ಯಾವುದೇ ಕಡತಗಳನ್ನು ತರಿಸಿ ಪರಿಶೀಲಿಸುವ ಮತ್ತು ಪರಿಷ್ಕರಿಸುವ ಅಧಿಕಾರವನ್ನು ಉಳಿಸಿಕೊಂಡು ಈ ತಕ್ಷಣದಿಂದ ಜಾರಿಗೆ ಬರುವಂತೆ, ಉಲ್ಲೇಖ-(2) ಮತ್ತು (3)ರ ನಡವಳಿಗಳ ಆದೇಶಗಳಲ್ಲಿ ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರು, ಮುಖ್ಯ ಅಭಿಯಂತರರು ಹಾಗೂ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿರುವುದನ್ನು ಮಾರ್ಪಡಿಸಿ, ಸದರಿಯವರುಗಳಿಗೆ ಈ ಕೆಳಕಂಡಂತೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸಲಾಗಿದೆ.

1) **ಆಡಳಿತಾತ್ಮಕ ಅನುಮೋದನೆ:-** ವಲಯ ಜಂಟಿ ಆಯುಕ್ತರು, ವಿಶೇಷ ಆಯುಕ್ತರು (ಯೋಜನೆ) ಮತ್ತು ಮಾನ್ಯ ಆಯುಕ್ತರರವರಿಂದ ಅನುಮೋದನೆ ಪಡೆದ ಹಾಗೂ ಅನುಮೋದಿತ ಪಿ.ಓ.ಡಬ್ಲ್ಯು ಕಡತಗಳಿಗೆ ಸಂಬಂಧಿಸಿದಂತೆ, ಪಾಲಿಕೆಯ ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರಿಗೆ ರೂ.10.00 ಲಕ್ಷಗಳ ವರೆಗೆ, ಮುಖ್ಯ ಅಭಿಯಂತರರಿಗೆ ರೂ.10.00 ಲಕ್ಷಕ್ಕೂ ಮೇಲ್ಪಟ್ಟು ರೂ.30.00 ಲಕ್ಷಗಳವರೆಗೆ ಹಾಗೂ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ರೂ.30.00 ಲಕ್ಷ ಮೇಲ್ಪಟ್ಟು ರೂ.50.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರ.

2) **ಟೆಂಡರ್ ಅನುಮೋದನೆ:-** ಮುಖ್ಯ ಅಭಿಯಂತರರುಗಳಿಗೆ ರೂ.25.00 ಲಕ್ಷಗಳವರೆಗಿನ ಕಾಮಗಾರಿ ಕಡತಗಳಿಗೆ ಹಾಗೂ ರೂ.25.00 ಲಕ್ಷಕ್ಕೂ ಮೇಲ್ಪಟ್ಟ ಮೊತ್ತದ ಕಾಮಗಾರಿ ಕಡತಗಳಿಗೆ ವಲಯ ಅಪರ / ಜಂಟಿ ಆಯುಕ್ತರು ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರುಗಳಿಗೆ ಟೆಂಡರ್ ಅನುಮೋದನೆ ಅಧಿಕಾರ ನೀಡುವುದು.

Scanned by CamScanner

3) ಕಾರ್ಯಪಾಲಕ ಅಭಿಯಂತರರಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ಎಲ್ಲಾ ಮೊತ್ತದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಪ್ರತಿಗೆ (Administation Memo) ಸಹಿ ಮಾಡುವ ಅಧಿಕಾರ ನೀಡುವುದು.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಿದೆ.
4. ಅಪರ ಆಯುಕ್ತರು (ಆಡಳಿತ) ರವರಿಗೆ ಕಳುಹಿಸಿದೆ.
5. ಅಪರ ಆಯುಕ್ತರು (ಆರೋಗ್ಯ) / (ಎಸ್.ಡಬ್ಲ್ಯು.ಎಂ) ರವರಿಗೆ ಕಳುಹಿಸಿದೆ.
6. ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಕಳುಹಿಸಿದೆ.
8. ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ / ಎಲ್ಲಾ ವಲಯ ಕಾರ್ಯಪಾಲಕ ಅಭಿಯಂತರರುಗಳಿಗೆ.
9. ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು, ಮಾನ್ಯ ಆಡಳಿತ ಪಕ್ಷದ ನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರುಗಳ ಅವಗಾಹನೆಗೆ ತರಲು ಕೋರಿದೆ.
10. ಅಧ್ಯಕ್ಷರು, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರಿಗೆ ಕಳುಹಿಸಿದೆ.
11. ಮುಖ್ಯ ಲೆಕ್ಕಾಧಿಕಾರಿಗಳು / ಮುಖ್ಯ ಲೆಕ್ಕಪರಿಶೋಧಕರು ರವರಿಗೆ ಕಳುಹಿಸಿದೆ.
12. ಎಲ್ಲಾ ವಲಯ ಸಹಾಯಕ ನಿಯಂತ್ರಕರು (ಹಣಕಾಸು) ರವರುಗಳಿಗೆ ಕಳುಹಿಸಿದೆ.
13. ಆಡಳಿತ ಶಾಖೆಯ ಸಹಾಯಕ ಆಯುಕ್ತರು (ಆಡಳಿತ-1) / ವ್ಯವಸ್ಥಾಪಕರು / ಎಲ್ಲಾ ವಿಷಯ ನಿರ್ವಾಹಕರಿಗೆ.
14. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸಿದೆ.
15. ಮಾಹಿತಿ ತಂತ್ರಜ್ಞಾನ ಸಲಹೆಗಾರರು, ಬೃ.ಬೆಂ.ಮ.ಪಾಲಿಕೆ ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
16. ಕಛೇರಿ ಪ್ರತಿ.

Scanned by CamScanner

(60)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ಕೇಂದ್ರ ಕಛೇರಿ ಆವರಣ, ನ.ರಾ.ವೃತ್ತ, ಬೆಂಗಳೂರು.

ಸಂಖ್ಯೆ:ಆಯುಕ್ತರು/ಪಿ.ಆರ್/ /2014-15 ದಿನಾಂಕ:13-03-2015

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮಂಡಿಸಿರುವ ಟಿಪ್ಪಣಿ.

ವಿಷಯ: ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ನಗರ ಸಭೆ ಮತ್ತು ಪುರಸಭೆಗಳ ವಿಶೇಷ ಅನುದಾನದ ಕ್ರಿಯಾ ಯೋಜನೆ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ.

=========

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ದಿನಾಂಕ:19-01-2015 ರ ಪತ್ರದಲ್ಲಿ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಂಡಿರುವ ನಗರ ಸಭೆ ಮತ್ತು ಪುರ ಸಭೆಗಳ ಹಿಂದುಳಿದ ಪ್ರದೇಶಗಳನ್ನು ರೂ.250.00 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ವಿಧಾನ ಸಭಾ ಕ್ಷೇತ್ರವಾರು ನಿಗಧಿಪಡಿಸಿರುವ ಅನುದಾನಕ್ಕೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಮತ್ತು ರಾಜರಾಜೇಶ್ವರಿ ವಿಧಾನ ಸಭಾ ಕ್ಷೇತ್ರಕ್ಕೆ ರೂ.45.00 ಕೋಟಿಗಳನ್ನು ನಿಗಧಿಪಡಿಸಿದ್ದು, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಪಡೆದು ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಸರ್ಕಾರದ ಪತ್ರದಲ್ಲಿ ನಿರ್ದೇಶಿಸಲಾಗಿತ್ತು.

ಅದರಂತೆ, ಕಾಮಗಾರಿಯ ಅವಶ್ಯಕತೆಗನುಗುಣವಾಗಿ ರೂ.45.00 ಕೋಟಿಗಳಿಗೆ ಒಟ್ಟು 64 ಕಾಮಗಾರಿ ಪಟ್ಟಿಗಳ ಪ್ರಸ್ತಾವನೆಯನ್ನು ತಯಾರಿಸಿ, ಸರ್ಕಾರಕ್ಕೆ ಮಂಡಿಸಿದ್ದು, ಸರ್ಕಾರವು ಸಂಖ್ಯೆ:ನಅಇ 745 ಎಂಎನ್‌ವೈ 2014, ದಿನಾಂಕ:29-01-2015 ರಲ್ಲಿ ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 64 ಕಾಮಗಾರಿಗಳ ರೂ.45.00 ಕೋಟಿಗಳ ಕ್ರಿಯಾ ಯೋಜನಾ ಪಟ್ಟಿಗೆ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ಸರ್ಕಾರದ ಆದೇಶದಂತೆ ಅನುಷ್ಟಾನಗೊಳಿಸುವ ಪ್ರಯುಕ್ತ ಅಂದಾಜುಪಟ್ಟಿಗಳನ್ನು ತಯಾರಿಸಿದ್ದು, ಕೆಳಕಂಡಂತೆ ನಮೂದಿಸಿರುವ ಒಟ್ಟು 49 ಕಾಮಗಾರಿಗಳಿಗೆ 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ "ಪಿ-3089 ಅಡಿಯಲ್ಲಿ ಜಾಬ್ ಸಂಖ್ಯೆ ನೀಡಿದ್ದು, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸದರಿ ಕಾಮಗಾರಿಗಳನ್ನು ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮತಿಯಿಂದ ನಿರ್ವಹಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

Sl. No	Name of work	Est.cost Rs.in Lakhs
1	Construction of Zym Building and Library Building at Jalahalli in Ward No-16	30.00
2	Construction of Mineral water Unit Building at West Side of the J.P.Park in ward No-17	20.00
3	Construction of Mineral water Unit Building at South Side of the J.P.Park in ward No-17	20.00
4	Construction of Mineral water Unit Building near Muthayalamma Temple in ward No-17	20.00
5	Construction of Mineral water Unit Building at East Side J.P.Park in ward No-17	25.00
6	Construction of Zym Building near HMT ground (J.P Park) in ward No-17	50.00
7	Construction of shops adjoining to Muthyalnagara Bus bay in ward No-17.	50.00

1) V. Sudhakar 4/5/15

2) T. Subhash Chandra 4/5/15

Scanned by CamScanner